# ಎಂಜಿನಿಯರ್ 2024ಕ್ಕೆ ಚಾಲನೆ



**ಎನ್‌ಐಟಿಕೆಯಲ್ಲಿ ಎಂಜಿನಿಯರ್-2024 ಉತ್ಸವಕ್ಕೆ ಚಾಲನೆ ನೀಡಲಾಯಿತು.**

**ವಿಕ ಸುದ್ದಿಲೋಕ** ಸುರತ್ಕಲ್

ಎಂಜಿನಿಯರ್‌ಗಳು ದೇಶದ ಭವಿಷ್ಯದ ರೂವಾರಿಗಳಾಗಿದ್ದು, ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಂಶೋಧನೆ ನಡೆಸಿ ಕ್ರಿಯಾಶೀಲತೆ ಹೆಚ್ಚಿಸಿಕೊಳ್ಳುವ ಮೂಲಕ ವೃತ್ತಿ ಬದುಕಿನಲ್ಲಿ ಯಶಸ್ಸಿನತ್ತ ಸಾಗಲು ಸಾಧ್ಯ ಎಂದು ದಿ. ಹಟ್ಟಿ ಗೋಲ್ಡ್ ಮೈನ್ಸ್‌ನ ಆಡಳಿತ ನಿರ್ದೇಶಕಿ ಶಿಲ್ಪಾ ಆರ್. ಹೇಳಿದರು.

ಎನ್‌ಐಟಿಕೆಯಲ್ಲಿ ಅ.20ರವರೆಗೆ ನಡೆಯಲಿರುವ ಎಂಜಿನಿಯರ್ 2024 ಉತ್ಸವ ಉದ್ಘಾಟಿಸಿ ಗುರುವಾರ ಮಾತನಾಡಿದರು.

ಹಟ್ಟಿ ಗೋಲ್ಡ್ ಮೈನ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ್ ಮುಖ್ಯ ಅತಿಥಿಯಾಗಿದ್ದರು. ಎನ್‌ಐಟಿಕೆ ಉಪ ನಿರ್ದೇಶಕ ಪ್ರೊ. ಸುಭಾಸ್ ಸಿ. ಯರಗಲ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕಲ್ಯಾಣ ವಿಭಾಗ ಡೀನ್ ಪ್ರೊ.ಎ.ಸಿ. ಹೆಗಡೆ, ಡಾ. ಎಸ್.ಬಿ.ಆರ್ಯ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮವು ಸುಮಾರು 25 ಸಾವಿರ ಸಂದರ್ಶಕರನ್ನು ಆಕರ್ಷಿಸುವ ನಿರೀಕ್ಷೆಯಿದ್ದು ಆಟೋ ಪ್ರದರ್ಶನ, ರೊಬೋಕಾನ್ ಪ್ರದರ್ಶನ, ಹ್ಯಾಕಥಾನ್ ಇತ್ಯಾದಿ ಆಯೋಜಿಸಲಾಗಿದೆ.

Vijaya Karnataka, Date:19/10/2024, p, no - 04